**ಪಿಡಬ್ಲೂಃ 01**

**ಇಂದು ದಿಃ01.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಬಿ.ಜಿ.ಕೆ. ವಕೀಲರಿಂದಃ</u>**

ಅಪಘಾತವಾದ ದಿನ ನನ್ನ ಮಗ ವಸಂತ್ ಕುಮಾರ್ ಬೈಕ್ ಓಡಿಸುತ್ತಿದ್ದ. ಅಪಘಾತವಾದ ನಂತರ ಹುಣಸೂರಿನ ಅಪೋಲೊ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಪಘಾತ ಹೇಗೆ ಆಯಿತು ಅಂತ ಹುಣಸೂರಿನ ಆಸ್ಪತ್ರೆಯಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಗೊತ್ತಿಲ್ಲ. ಮಡಿಕೇರಿ-ಮೈಸೂರು ರಾಷ್ಟ್ರಿಯ ಹೆದ್ದಾರಿಯಲ್ಲಿ ಅಪಘಾತವಾಗಿದೆ ಎಂದರೆ ಸರಿ. ಅಪಘಾತ ಪಡಿಸಿದ ವಾಹನದ ಸಂಖ್ಯೆ ಗೊತ್ತಿಲ್ಲ. ಆ ನಂತರವು ಕೇಳಿ ತಿಳಿದುಕೊಂಡಿಲ್ಲ. ಅಪಘಾತ ಪಡಿಸಿದ ವ್ಯಕ್ತಿಯ ಹೆಸರು ಕುಮಾರ. ನಮಗೆ ಅಪಘಾತ ಪಡಿಸಿದ ವಾಹನ ಹಿಂದಿನಿಂದ ಬರುತ್ತಿತ್ತು. ಅಪಘಾತವಾದ ಸ್ಥಳದಿಂದ ನಮಿಂದ ಎಡಭಾಗಕ್ಕೆ ಇನ್ನು 5 ಅಡಿ ಜಾಗವಿತ್ತು ಎಂದರೆ ಗೊತ್ತಿಲ್ಲ. ಅಪಘಾತವಾದ ಸ್ಥಳದಿಂದ ಇನ್ನು ಸ್ವಲ್ಪ ಎಡ ಭಾಗಕ್ಕೆ ಹೋಗಿದರೆ ಅಪಘಾತವನ್ನು ತಪ್ಪಿಸ ಬಹುದಿತ್ತು ಎಂದರೆ ನಾವು ಎಡಭಾಗದಲ್ಲೇ ಹೋಗುತ್ತಿದ್ದೇವು. ನನ್ನ ಮಗನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಈಗ ನಾನು ವ್ಯವಸಾಯ ಮಾಡುತ್ತಿದ್ದೇನೆ, ಈಗ ಮುಸಗಿನ ಜೋಳ ಬೆಳೆದಿದ್ದೇನೆ. ಈಗಲೂ ಸಹಾ ವ್ಯವಸಾಯ ಮಾಡುತ್ತಿರುವುದರಿಂದ ಆದಾಯ ನಷ್ಟ ಉಂಟಾಗಿದೆ ಎಂದರೆ ಸರಿಯಲ್ಲ. ನನ್ನ ಆದಾಯದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಆಸ್ಪತ್ರೆಗೆ 3 ಲಕ್ಷ ರೂಪಾಯಿ ಖರ್ಚು ಆಗಿದೆ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ್ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನನಗೆ 65 ವರ್ಷ ವಯಸ್ಸಾಗಿದೆ. ನನ್ನ ಆಧಾರ್ ಕಾರ್ಡ್ ಪ್ರಕಾರ ನನ್ನ ಜನ್ಮ ದಿನಾಂಕ 03-01-1963 ಎಂದರೆ ಸರಿ. ನನ್ನ ಮಗನ ತಪ್ಪಿನಿಂದಲ್ಲೇ ಅಪಘಾತವಾಗಿರುವುದರಿಂದ 2 ನೇ ಎದುರುದಾರರು ನನಗೆ ಪರಿಹಾರ ಕೊಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ಮೊದಲಿನಂತೆ ಈಗಲೂ ಸಹಾ ಕೆಲಸ ಮಾಡುತ್ತಿರುವುದರಿಂದ ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**